**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,ಹುಣಸೂರು**

**ಸಿಸಿ ನಂ.491/2023**

**ಫಿರ್ಯಾದುದಾರರುಃ** ಸರ್ಕಾರ (ಹುಣಸೂರು ಪಟ್ಟಣ ಪೋಲೀಸರಿಂದ)

– ವಿರುದ್ಧ –

**ಆರೋಪಿತರುಃ**

1. ಹೊಳೆಗೌಡ, ಬಿನ್ ನಿಂಗೇಗೌಡ,
72 ವರ್ಷ, ಕಾರ್ಮಿಕ
2. ರಾಜು, ಬಿನ್ ಹೊಳೆಗೌಡ,
44 ವರ್ಷ, ವ್ಯವಸಾಯ,
3. ಮಮತಾ, ಕೋಂ ರಾಜು, 42 ವರ್ಷ,
ಗೃಹಿಣಿ,

ಎಲ್ಲರೂ ವಾಸಃ ಲಕ್ಷ್ಮೀಬಾರ್ ಹಿಂಭಾಗ,
ಕಲ್ಲುಣಿಕೆ, ಹುಣಸೂರು ಟೌನ್.

**ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313ರ ಅಡಿಯಲ್ಲಿ ಆರೋಪಿತರ ಹೇಳಿಕೆ**

| | |
|---|---|
| ಪ್ರಶ್ನೆ 1: | ಅಭಿಯೋಜನೆಯ ಪರವಾಗಿ ವಿಚಾರಣೆಯಾದ ಸಾಕ್ಷ್ಯಗಳನ್ನು ನೀವು ತಿಳಿದುಕೊಂಡಿರುವಿರಾ? |
| ಉತ್ತರ: | ತಿಳಿದಿದೆ |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 2: | ಪಿ.ಡಬ್ಲ್ಯೂ – 1 ನಿಂಗಯ್ಯರವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.2 ಕುಮಾರ, ಚಾಸಾ.3 ಲೀಲಾವತಿ ಅವರ ಮಗ ಮತ್ತು ಸೊಸೆಯಾಗಿದ್ದು, ಚಾಸಾ.4 ಶಿವಣ್ಣ, ಚಾಸಾ.5 ಬೀರೇಶ, ಚಾಸಾ.6 ಯೋಗೇಶ ಹಾಗೂ 1 ಮತ್ತು 3ನೇ ಆರೋಪಿತರಾದ ನೀವು ಗೊತ್ತಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು |

| | |
|---|---|
| | ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಪ್ರಶ್ನೆ 3: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 03.07.2023ರಂದು ಸಂಜೆ 4 ರಿಂದ 4.30 ಗಂಟೆಗೆ ಅವರು ಕೆಲಸ ಮುಗಿಸಿ ಮನೆಗೆ ಬಂದಿದ್ದು, ಆಗ ಚಾಸಾ.3 ರವರು ಅವರ ಬಳಿ ಅವರ ಮಗನಾದ ಚಾಸಾ.2 ಕುಮಾರ ರವರಿಗೆ ಕಲ್ಲುಣಿಕೆ ಸರ್ಕಲ್ ನಲ್ಲಿ ಹಲ್ಲೆ ಮಾಡಿದ್ದಾರೆ ಎಂದು ಹೇಳಿದರು ಎಂದು ತಿಳಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 4: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಚಾಸಾ.2ರವರಿಗೆ ಆರೋಪಿತರಾದ ನೀವು ಹೊಡೆದಿದ್ದು, ಚಾಸಾ.3ರವರು ಚಾಸಾ.2ರವರು ಆಸ್ಪತ್ರೆಯಲ್ಲಿ ಇದ್ದಾರೆ ಎಂದು ಹೇಳಿದ್ದು, ಅವರು ತಕ್ಷಣ ಹುಣಸೂರು ಸರ್ಕಾರಿ ಆಸ್ಪತ್ರೆಗೆ ಹೋದಾಗ ಚಾಸಾ.2ರವರಿಗೆ ಚಿಕಿತ್ಸೆ ಕೊಡಿಸುತ್ತಿದ್ದು, ಅವರು ಚಾಸಾ.2ರವರ ಬಳಿ ಏನಾಯಿತು ಎಂದು ಕೇಳಿದಾಗ ಚಾಸಾ.2ರವರು ಸಂಜೆ 4 ರಿಂದ 4.30 ಗಂಟೆಗೆ ಕೆಲಸ ಮಾಡಿ ಬರುತ್ತಿದ್ದಾಗ ಕಲ್ಲುಣಿಕೆ ಸರ್ಕಲ್ ಬಳಿ ಆರೋಪಿತರಾದ ನೀವು ಬಂದು ಏನೋ ಬೋಳಿ ಮಗನೇ ಹೊಲದ ಮಣ್ಣು ತುಂಬಿದ ಬಗ್ಗೆ ಬೈದರು ಎಂದು ತಿಳಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ |

| | |
|---|---|
| | ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 5: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಚಾಸಾ.2ರವರನ್ನು 1ನೇ ಆರೋಪಿಯಾದ ನೀವು ಹಿಡಿದುಕೊಂಡಾಗ, 2ನೇ ಆರೋಪಿಯಾದ ನೀವು ಕೈಯಿಂದ ಚಾಸಾ.2ರವರ ಬೆನ್ನಿಗೆ ಗುದ್ದಿದ್ದು, ನಂತರ 3ನೇ ಆರೋಪಿಯಾದ ನೀವು ಬಂದು ಕಲ್ಲಿನಿಂದ ಚಾಸಾ.2ರವರ ಎಡಭುಜಕ್ಕೆ ಮತ್ತು ತಲೆಯ ಎಡಭಾಗಕ್ಕೆ ಹೊಡೆದಿರುತ್ತೀರಿ ಎಂದು ಚಾಸಾ.2ರವರು ಅವರಿಗೆ ಹೇಳಿದರು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 6: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಅವರು ಮಗನಿಗೆ ಚಿಕಿತ್ಸೆ ಕೊಡಿಸಿದ್ದು, ಆರೋಪಿತರಾದ ನೀವು ರಾಜಿಗೆ ಬಾರದ ಕಾರಣ ಘಟನೆ ನಡೆದ 15 ದಿನದ ನಂತರ ತಡವಾಗಿ ನಿಪಿ-1 |

| | |
|---|---|
| | ರ ದೂರನ್ನು ಕೊಟ್ಟಿರುವುದಾಗಿ, ಅದರಲ್ಲಿರುವ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 7: | ಪಿ.ಡಬ್ಲ್ಯು-2 ಕುಮಾರು ರವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.1ನಿಂಗಯ್ಯ ಅವರ ತಂದೆ, ಚಾಸಾ.3 ಲೀಲಾವತಿ ಅವರ ಪತ್ನಿಯಾಗಿದ್ದು, ಅವರಿಗೆ ಚಾಸಾ.4 ರಿಂದ 6 ಹಾಗೂ ಆರೋಪಿತರಾದ ನೀವು ಗೊತ್ತಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 8: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 15.07.2023ರಂದು ಸಂಜೆ 4.30 ಗಂಟೆಗೆ ಅವರು ಕೆಲಸ ಮುಗಿಸಿಕೊಂಡು ಕಲ್ಲುಣಿಕೆ ಸರ್ಕಲ್ ನಲ್ಲಿ ಬರುತ್ತಿದ್ದಾಗ 1ನೇ ಆರೋಪಿಯಾದ ನಿಮ್ಮ ಬಳಿ ಜಮೀನಿನ ಮಣ್ಣು ತೆಗೆದ ಬಗ್ಗೆ |

| | |
|---|---|
| | ಕೇಳಿದಾಗ 2ನೇ ಆರೋಪಿಯಾದ ನೀವು ಹಿಂದುಗಡೆಯಿಂದ ಬಂದು ಅವರನ್ನು ತಬ್ಬಿ ಹಿಡಿದುಕೊಂಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 9: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆಗ 3ನೇ ಆರೋಪಿಯಾದ ನೀವು ಕಲ್ಲಿನಿಂದ ಅವರ ಎಡಭುಜಕ್ಕೆ ಮತ್ತು ತಲೆಯ ಎಡಭಾಗಕ್ಕೆ ಹೊಡೆದು, ಎಲ್ಲರು ಸೇರಿ ಅವರನ್ನು ಕೆಳಕ್ಕೆ ಹಾಕಿ ಚೆನ್ನಾಗಿ ಹೊಡೆದಿರುವುದಾಗಿ ಎಂದು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 10: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆಗ ಸ್ವಲ್ಪ ಜನರು ಬಂದು ಗಲಾಟೆ ಬಿಡಿಸಿದ್ದು, ನಂತರ ಪೊಲೀಸರು ಬಂದು ನೀವು ಕರೆದುಕೊಂಡು ಹೋಗಿದ್ದು, ಅವರನ್ನು ಬೇರೆಯವರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನಂತರ ಪೊಲೀಸರು ಬಂದು ಬರೆದ |

| | |
|---|---|
| | ನಿಪಿ.2 ಮಹಜರಿಗೆ ಸಹಿ ಹಾಕಿದುದ ಅದರಲ್ಲಿ ಅವರ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಿದ್ದು, ಪೊಲೀಸ್ ಠಾಣೆಯಲ್ಲಿ ಹೇಳಿಕೆ ಕೊಟ್ಟಿರುವುದಾಗಿ ಹಾಗು ನೀವು ಹಲ್ಲೆ ಮಾಡಲು ಉಪಯೋಗಿಸಿದ ಮು.ಮಾ.1 ರ ಕಲ್ಲನ್ನು ನೋಡಿ ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 11: | ಪಿ.ಡಬ್ಲ್ಯೂ – 3 ಲೀಲಾವತಿ ಇವರು ತಮ್ಮ ಸಾಕ್ಷ್ಯದಲ್ಲಿ, ಚಾಸಾ.1 ಅವರ ಮಾವರಾಗಿದ್ದು, ಚಾಸಾ.2 ಅವರ ಗಂಡನಾಗಿದ್ದು, ಚಾಸಾ.4 ಮತ್ತು ಆರೋಪಿತರಾದ ನೀವು ಅವರಿಗೆ ಗೊತ್ತಿದ್ದು, ದಿನಾಂಕಃ 03.07.2023ರಂದು ಸಂಜೆ 4.15 ಸಮಯದಲ್ಲಿ ಅವರ ಗಂಡ ಚಾಸಾ.2ರವರು ಕಲ್ಲುಣಿಕೆ ಸರ್ಕಲ್ ನಲ್ಲಿ 1ನೇ ಆರೋಪಿಯಾದ ನಿಮ್ಮ ಬಳಿ ಹೊಲದ ವಿಚಾರದಲ್ಲಿ ಮಾತನಾಡಿದ್ದರು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |

| | |
|---|---|
| ಪ್ರಶ್ನೆ 12: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆಗ 2ನೇ ಆರೋಪಿಯಾದ ನೀವು ಏಕಾಏಕಿ ಬಂದು ಚಾಸಾ.2ರವರನ್ನು ಹಿಡಿದುಕೊಂಡು ಕೈಯಿಂದ ಚಾಸಾ.2ರವರ ಭುಜ ಮತ್ತು ಎದೆಗೆ ಹೊಡೆದಿದ್ದು, 3ನೇ ಆರೋಪಿಯಾದ ನೀವು ಕಲ್ಲಿನಿಂದ ಚಾಸಾ.2ರವರ ತಲೆಗೆ ಮತ್ತು ಎಡ ಭುಜಕ್ಕೆ ಹೊಡೆದಿದ್ದು, ಈ ವಿಷಯವನ್ನು ಅವರಿಗೆ ಯಾರೋ ಬಂದು ಹೇಳಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 13: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ಹೋಗುವಷ್ಟರಲ್ಲಿ ನೀವು ಚಾಸಾ.2ರವರಿಗೆ ಹೊಡೆದಿದ್ದು, ಅವರು ಮತ್ತು ಚಾಸಾ.4ರವರು ಗಲಾಟೆಯನ್ನು ಬಿಡಿಸಿ ಸಮಾಧಾನ ಮಾಡಿದ್ದು, ಅವರು ಚಾಸಾ.2ರವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |

| | |
|---|---|
| ಪ್ರಶ್ನೆ 14: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಈ ಬಗ್ಗೆ ಅವರು ಪೊಲೀಸರ ಮುಂದೆ ಹೇಳಿಕೆ ನೀಡಿದ್ದು, ನೀವು ಚಾಸಾ.2ರವರಿಗೆ ಹೊಡೆಯಲು ಉಪಯೋಗಿಸಿದ ಮು.ಮಾ.1 ಕಲ್ಲನ್ನು ನೋಡಿ ಗುರುತಿಸಿದ್ದು ಮತ್ತು ಅವರು ಗಲಾಟೆಯನ್ನು ಪ್ರತ್ಯಕ್ಷವಾಗಿ ನೋಡಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 15: | ಪಿ.ಡಬ್ಲ್ಯೂ – 6 ಬಸವೇಗೌಡ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 08.07.2023ರಂದು ಸಂಜೆ 5.00 ಗಂಟೆಗೆ ಅವರು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ.1ರವರು ಠಾಣೆಯಲ್ಲಿ ಅವರ ಮುಂದೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ಅದರ ಆಧಾರದ ಮೇಲೆ ಠಾಣಾ ಮೊಕದ್ದಮೆ ಸಂಃ134/2023ರಲ್ಲಿ ಪ್ರಕರಣ ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |

| | |
|---|---|
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 16: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅವರು ಸ್ವೀಕರಿಸಿದ ನಿಪಿ.1ದೂರಿನಲ್ಲಿರವ ಅವರ ಸಹಿಯನ್ನು ನಿಪಿ.1(ಬಿ) ಎಂದು ಹಾಗೂ ಅವರು ಸಲ್ಲಿಸಿದ ಪ್ರಥಮ ವರ್ತಮಾನ ವರದಿಯಲ್ಲಿರುವ ಅವರ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 17: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 10.07.2023ರಂದು ಕೃತ್ಯ ನಡೆದ ಸ್ಥಳಕ್ಕೆ ಮಹಜರಿಗಾಗಿ ಹೋದಾಗ ಯಾರು ಸಿಗದೇ ಇದ್ದು, ನಂತರ ದಿನಾಂಕಃ 14.07.2023ರಂದು ಚಾಸಾ.2ರವರ ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ಹುಣಸೂರು ಸರ್ಕಾರಿ ಆಸ್ಪತ್ರೆಗೆ ಮನವಿ ಸಲ್ಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |

| | |
|---|---|
| ಪ್ರಶ್ನೆ 18: | ಇದೇ ಸಾಕ್ಷಿಯು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ದಿನಾಂಕಃ 15.07.2023ರಂದು ಪುನಃ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು ಚಾಸಾ.2ರವರು ಹಾಜರಿದ್ದು, ಸ್ಥಳ ತೋರಿಸಿದ ಮೇರೆಗೆ ಪಂಚರಾದ ಚಾಸಾ.5 ಮತ್ತು ಚಾಸಾ.6ರವರನ್ನು ಸ್ಥಳಕ್ಕೆ ಬರಮಾಡಿಕೊಂಡು ಅವರ ಸಮಕ್ಷಮ ಬೆಳಿಗ್ಗೆ 8 ರಿಂದ 9 ಗಂಟೆಯವರೆಗೆ ಸ್ಥಳ ಮಹಜರ್ ಕ್ರಮ ಜರುಗಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 19: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಮಹಜರು ಸಮಯದಲ್ಲಿ ಕೃತ್ಯ ನಡೆದ ಸಮಯದಲ್ಲಿ ಉಪಯೋಗಿಸಿದ ಮು.ಮಾ.1 ಕಲ್ಲನ್ನು ಚಾಸಾ.2ರವರು ಹಾಜರುಪಡಿಸಿದ್ದು, ಅದನ್ನು ಅಮಾನುತಪಡಿಸಿಕೊಂಡಿದ್ದು, ಅವರು ಮು.ಮಾ.1 ಕಲ್ಲನ್ನು ನೋಡಿ ಗುರುತಿಸಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |

| | |
|---|---|
| ಪ್ರಶ್ನೆ 20: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಂತರ ಠಾಣೆಗೆ ವಾಪಸ್ಸಾಗಿ ಅಮಾನತ್ತುಪಡಿಸಿಕೊಂಡ ಕಲ್ಲನ್ನು ಮಾಲುಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕಾಗಿ ಆದೇಶಕ್ಕಾಗಿ ನಿವೇದಿಸಿಕೊಂಡಿದ್ದು, ಅದೇ ದಿನ ಚಾಸಾ.2 ರಿಂದ 4ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 21: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 27.02.2023ರಂದು ಆರೋಪಿತರಾದ ನಿಮ್ಮನ್ನು ಠಾಣೆಗೆ ಬರಮಾಡಿಕೊಂಡು ವಿಚಾರಣೆಗೆ ಒಳಪಡಿಸಿದ್ದು, ಅವರು ನಿಮ್ಮನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 22: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ |

| | |
|---|---|
| | 28.07.2023ರಂದು ಹುಣಸೂರು ಸರ್ಕಾರಿ ಆಸ್ಪತ್ರೆಯಿಂದ ಚಾಸಾ.2ರವರ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿದ್ದು, ಈ ಹಂತದಲ್ಲಿ ತನಿಖೆ ಪೂರ್ಣಗೊಂಡ ಕಾರಣ ನಿಮ್ಮ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 23: | ಪಿ.ಡಬ್ಲ್ಯೂ-7 ಡಾ.ವೆಂಕಟರಾಮ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 03.07.2023ರಂದು ಸಂಜೆ 4.45 ಗಂಟೆಗೆ ಚಾಸಾ.2ರವರು ಹಲ್ಲೆಗೆ ಒಳಗಾದ ಹಿನ್ನಲೆಯಲ್ಲಿ ಚಿಕಿತ್ಸೆಗೆ ಅವರ ಮುಂದೆ ಹಾಜರಾಗಿದ್ದು, ಅವರನ್ನು ಪರೀಕ್ಷಿಸಿದಾಗ ಅವರ ಎಡಭುಜದಲ್ಲಿ ಮತ್ತು ಹಣೆಯ ಎಡಭಾಗದಲ್ಲಿ ನೋವು ಮತ್ತು ಮುಟ್ಟಿದರೆ ನೋವಿರುವುದಾಗಿ ಹೇಳಿದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |

| | |
|---|---|
| ಪ್ರಶ್ನೆ24: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅವರ ಅಭಿಪ್ರಾಯದಲ್ಲಿ ಮೇಲೆ ಹೇಳಿದ 2 ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಆ ಬಗ್ಗೆ ನಿಪಿ.5ರಂತೆ ಗಾಯದ ಪ್ರಮಾಣ ಪತ್ರ ನೀಡಿದ್ದು, ಅದರಲ್ಲಿರುವ ಅವರ ಸಹಿಯನ್ನು ನೋಡಿ ನಿಪಿ.5(ಬಿ) ಎಂದು ಗುರುತಿಸಿದ್ದು, ಒಬ್ಬ ವ್ಯಕ್ತಿಗೆ ಮು.ಮಾ.1 ರ ಕಲ್ಲಿನಿಂದ ಹಲ್ಲೆ ಮಾಡಿದರೆ ನಿಪಿ.5ರಲ್ಲಿ ನಮೂದಿಸಿದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ25: | ಪಿ.ಡಬ್ಲ್ಯೂ- 8 ಯೋಗೇಶ ಇವರು ತಮ್ಮ ಸಾಕ್ಷ್ಯದಲ್ಲಿ, ನಿಪಿ.2 ಮಹಜರಿನಲ್ಲಿರುವ ಅವರ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಿದ್ದು, ಸದರಿ ಸಹಿಯನ್ನು ದಿನಾಂಕಃ 15.07.2023ರಂದು ಘಟನಾ ಸ್ಥಳದಲ್ಲಿ ಮಾಡಿದ್ದು, ಪೊಲೀಸರಿಗೆ ಸ್ಥಳವನ್ನು ಅವರೇ ತೋರಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |

| | |
|---|---|
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 26: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ನಿಪಿ.2 ಮಹಜರ್ ನ್ನು ಬೆಳಿಗ್ಗೆ 8 ರಿಂದ 9 ಗಂಟೆಯವರೆಗೆ ಮಾಡಿದ್ದು, ಅವರ ಜೊತೆ ಚಾಸಾ.5ರವರು ಸಹಿ ಹಾಕಿದ್ದು ಹಾಗೂ ಚಾಸಾ.1ರವರು ಹಾಜರಿದ್ದರು ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 27: | ಇದೇ ಸಾಕ್ಷಿಯು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಪೊಲೀಸರು ಮಹಜರು ಮಾಡುವ ಸಮಯದಲ್ಲಿ ಒಂದುಕಲ್ಲನ್ನು ಅಮಾನತ್ತುಪಡಿಸಿಕೊಂಡಿದ್ದು, ಅದನ್ನು ನೋಡಿ ಗುರುತಿಸಿದ್ದು, ನಿಪಿ.2ರಲ್ಲಿ ಬರೆದ ವಿಷಯಗಳು ಗೊತ್ತಿದ್ದು, ಓದಿ ಸಹಿ ಹಾಕಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಾ? |
| ಉತ್ತರ: | ಸುಳ್ಳು |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |

| | |
|---|---|
| ಪ್ರಶ್ನೆ 28: | ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ? |
| ಉತ್ತರ: | ಇಲ್ಲ |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |
| ಪ್ರಶ್ನೆ 29: | ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ? |
| ಉತ್ತರ: | ಇಲ್ಲ |
| ಆರೋಪಿ ನಂ.1 | |
| ಆರೋಪಿ ನಂ.2 | ರಾಜು |
| ಆರೋಪಿ ನಂ.3 | ಮಮತ.ಎ.ವಿ., |

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಮತ್ತು ಸರಿಯಾಗಿದೆಯೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 17.03.2026.

Sd/-

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ., ಹುಣಸೂರು.**

ANITHA

Digitally signed by ANITHA
Date: 2026.03.17 17:57:09 +0530